ಪದೇ ಅಡ್ಡಿಪಡಿಸತಕ್ಕಂಥ ನೀತಿಯನ್ನು ನಾನು ಪ್ರತಿಭಟಿಸುತ್ತಾ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ಎ.ಬಿ. ಜಕನೂರು : ಮಾನ್ಯ ಉಪಾಧ್ಯಕ್ಷೀಣೆಯವರೇ, ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಿಟ್ಟಿನ ಭರದಲ್ಲಿ ಶ್ರೀ ವೈ. ನಾಗಪ್ಪನವರನ್ನು ಉದ್ದೇಶಿಸಿ 'ನೀನ್ಯಾರೋ ನನಗೆ ಹೇಳಲಿಕ್ಕೆ' ಎಂದು ಹೇಳಿದ್ದಾರೆ. ಅದು ಕಡತಕ್ಕೆ ಹೋಗಿರುವುದರಿಂದ ಆ ಪದವನ್ನು ಕಡತದಿಂದ ತೆಗೆಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಆಗಬಹುದು.

(ಗೊಂದಲ)

ಶಾ. ವೈ. ನಾಗಪ್ಪ : ಇವರು ವಿಧಾನಸಭೆಯಲ್ಲಿ ಛಾಲೆಂಜ್ ಮಾಡುತ್ತಿದ್ದಾರೆ. ಛಾಲೆಂಜ್ ಮಾಡುವುದು ಹೊರಗಡೆ ಚುನಾವಣೆಯಲ್ಲಿ ಇಲ್ಲಿ ಏನು ಇವರು ಛಾಲೆಂಜ್ ಮಾಡುವುದು?

MADAM CHAIRMAN : The House stands adjoeurn to meet at 5.00 P.M.

(ಸಭೆಯು ಸಂಜೆ 6.05 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಮುಖ್ಯ ಮಂತ್ರಿಗಳಿಂದ ಮನವಿ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಕಾಲದಲ್ಲಿ ಸ್ವಲ್ಪ ಆಡಿತಡೆ ಉಂಟಾಯಿತೆಂಬ ಭಾವನೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ಹೊರಗೆ ಹೋದರೆಂದು ತಿಳಿದುಬಂತು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಈ ಸಂದರ್ಭದಲ್ಲಿ ಅವರಿಗೆ ಉತ್ತರ ಕೊಡತಕ್ಕದ್ದು ನಮ್ಮ ಕರ್ತವ್ಯ. ಆ ಸದಸ್ಯರೇ ಇರಬಹುದು. ಬೇರೆ ಮಾನ್ಯ ಸದಸ್ಯರು ಯಾರೇ ಇರಬಹುದು. ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ಮಾತನಾಡುವುದಕ್ಕೆ, ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವುದಕ್ಕೆ ಹಕ್ಕು ಇದೆ. ಅದೇರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಮೇಲೆ ಅದಕ್ಕೆ ಏನು ಉತ್ತರವನ್ನು ಕೊಡಬೇಕೆಂಬುದಕ್ಕೆ ನಮಗೂ ಕೂಡ ಹಕ್ಕು ಇದ್ದೇ ಇರುತ್ತದೆ. ಆ ಹಕ್ಕಿನ ವ್ಯಾಪ್ತಿಯಲ್ಲಿ ಕವರ್ ಮಾಡುವುದಕ್ಕೆ ನಮಗೂ ಸಾಧ್ಯಾವಾಗುತ್ತದೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹಿರಿಯ ಸದಸ್ಯರು, ಅವರೂ ಕೂಡ ತಡೆದುಕೊಳ್ಳಬಹುದಿತ್ತು. ಅವರೂ ಕೂಡ ಸಾಕಷ್ಟು ವಿಚಾರವನ್ನು ಮಾತನಾಡಿದ್ದರೂ, ಇನ್ನೂ ಸ್ವಲ್ಪ ಮಾತನಾಡುವುದು ಇತ್ತು. ಅದರೂ ಕೂಡ ಅದಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಕೇಳಿ ನಮಗೂ ಸಮಾಧಾನ ಆಗಲಿಲ್ಲ.